# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಉಪ ಆರೋಗ್ಯಾಧಿಕಾರಿ (ಪೂರ್ವ) ರೆಸಿಡೆನ್ಸಿ ರೋಡ್, ಮೆಯೋಹಾಲ್ ಬೆಂಗಳೂರು.

ದಿನಾಂಕ : 21-12-2020

ಸಂಖ್ಯೆ : ಉಪ(ಪೂ)/ಪಿಆರ್/310/2020-21

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಶಾಂತಿನಗರ ವಿಭಾಗ, ಪೂರ್ವ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ -116 ನೀಲಸಂದ್ರದ ವಾರ್ಡ್ ಸಮಿತಿ ಸಭೆಯನ್ನು ಜಸ್ಮಾದೇವಿ ಮಂದಿರ, ಅಸ್ಟಿನ್‌ಟೌನ್, ನೀಲಸಂದ್ರದಲ್ಲಿ ದಿನಾಂಕ : 19-12-2020 ರಂದು ಮಧ್ಯಾಹ್ನ 2:00 ಗಂಟೆಗೆ ಸಭೆಯಲ್ಲಿ ಚರ್ಚಿಸಲಾದ ಸಭೆಯ ನಡವಳಿಗಳು.**

**ಸಭೆಗೆ ಹಾಜರಿದ್ದ ಸದ್ಯಸರು ಹಾಗೂ ಅಧಿಕಾರಿಗಳು**

| ಕ್ರಮ ಸಂಖ್ಯೆ | ಸದ್ಯಸರ ಹೆಸರುಗಳು |
|---|---|
| 1 | ಡಾ॥ ಸಂಗಮಿತ್ರ ನೋಡಲ್ ಅಧಿಕಾರಿ (ನೀಲಸಂದ್ರ 116) ಹಾಗೂ ಉಪ ಆರೋಗ್ಯಾಧಿಕಾರಿಗಳು ಪೂರ್ವ. |
| 2 | ಶ್ರೀ ಮಧು ಆರ್, ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ. |
| 3 | ಶ್ರೀಮತಿ ಎಂ. ಫರ್ಜಾನಾ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ) |
| 4 | ಶ್ರೀ ಹರ್ಷ ಎಸ್, ಕಿರಿಯ ಅಭಿಯಂತರರು (ಕಾರ್ಯದರ್ಶಿ) |
| 5 | ಶ್ರೀ ಅಪ್ಪುರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ, ಘನತ್ಯಾಜ್ಯಾ) |
| 6 | ಶ್ರೀ ಸಗಾಯ್‌ರಾಜ್, ಹಿರಿಯ ಆರೋಗ್ಯ ಪರಿವೀಕ್ಷಕರು, (ನೀಲಸಂದ್ರ) |
| 7 | ಶ್ರೀ ನೀಲಾಂಜನಪ್ಪಾ, ಕಿರಿಯ ಆರೋಗ್ಯ ಪರಿವೀಕ್ಷಕರು, (ನೀಲಸಂದ್ರ) |
| 8 | ಶ್ರೀ ಗುರುಮೂರ್ತಿ, ಕಂದಾಯ ಅಧಿಕಾರಿಗಳು, ನೀಲಸಂದ್ರ. |
| 9 | ಶ್ರೀ ನಂಜುಡ, ಕಿರಿಯ ಅಭಿಯಂತರರು, ಬೋರವೆಲ್ ಇಲಾಖೆ. |
| 10 | ಶ್ರೀ ಶ್ರೀನಿವಾಸ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 11 | ಶ್ರೀ ಅಕ್ರಮ್ ಪಾಷಾ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 12 | ಶ್ರೀ ನಾಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ. |
| 13 | ಶ್ರೀ ವೆಂಕಟೇಶ್ವರ್ ರೆಡ್ಡಿ, ಸಹಾಯಕ ಅಭಿಯಂತರರು, ಬೆಸ್ಕಾಂ. |
| 14 | ಶ್ರೀ ವಿಜಯಕುಮಾರ್, ಸಹಾಯಕ ಅಭಿಯಂತರರು, ಸ್ಲಂ ಬೋರ್ಡ್. |
| 15 | ಶ್ರೀಮತಿ ಅಶ್ವಿನಿ, ಅಶೋಕನಗರ, ಲಾ & ಆರ್ಡರ್, ಪೊಲೀಸ್ ಇಲಾಖೆ. |
| 16 | ಶ್ರೀ ಕುಮಾರ್ ಅಶೋಕನಗರ ಲಾ & ಆರ್ಡರ್, ಪೊಲೀಸ್ ಇಲಾಖೆ. |
| 17 | ಶ್ರೀಮತಿ ಶೈಲಜ, ಸಹಾಯಕ ಕಂದಾಯ ಅಧಿಕಾರಿಗಳು, ಕಲ್ಯಾಣ ಇಲಾಖೆ |
| 18 | ಶ್ರೀ ಮಂಜಪ್ಪ, ಸಹಾಯಕ ಅಭಿಯಂತರರು, ವಿದ್ಯುತ್, ಬಿಬಿಎಂಪಿ. |
| 19 | ಶ್ರೀ ದೇವರಾಜ್, ಅರಣ್ಯ ಇಲಾಖೆ. |
| 20 | ಶ್ರೀಮತಿ ಷರೀಫ್, ಸದ್ಯಸರು (ನೀಲಸಂದ್ರ) |
| 21 | ಶ್ರೀ ಮುತ್ತು, ಸದ್ಯಸರು (ನೀಲಸಂದ್ರ) |
| 22 | ಶ್ರೀಮತಿ ಸುಮತಿ, ಸದ್ಯಸರು (ನೀಲಸಂದ್ರ) |
| 23 | ಶ್ರೀ ಗೋವಿಂದ್‌ರಾಜ್, ಸದ್ಯಸರು (ನೀಲಸಂದ್ರ) |
| 24 | ಶ್ರೀ ಅನೀಜ್ ಅಕ್ತರ್, ಸದ್ಯಸರು (ನೀಲಸಂದ್ರ) |
| 25 | ಶ್ರೀ ಇದ್ರೀಜ್, ಸದ್ಯಸರು (ನೀಲಸಂದ್ರ) |
| 26 | ಶ್ರೀ ಅಲ್‌ಫೋಜ್, ಸದ್ಯಸರು (ನೀಲಸಂದ್ರ) |
| 27 | ಶ್ರೀ ಶಿವಕುಮಾರ್, ಸದ್ಯಸರು (ನೀಲಸಂದ್ರ) |
| 28 | ಶ್ರೀಮತಿ ಅಮೃತ ಮೇರಿ, ಸದ್ಯಸರು (ನೀಲಸಂದ್ರ) |

ಶಾಂತಿನಗರ ಕ್ಷೇತ್ರದ ಮಾನ್ಯ ಶಾಸಕರಾದ ಎನ್.ಎ ಹ್ಯಾರೀಸ್ ರವರು ಸಭೆಯಲ್ಲಿ ಪಾಲ್ಗೊಂಡು ಸಲಹೆ, ಸೂಚನೆ, ಹಾಗೂ ಮಾರ್ಗದರ್ಶನ ನೀಡಿದರು.

ಸಮಿತಿಯ ಅಧ್ಯಕ್ಷರಾದ, ಶ್ರೀಮತಿ. ಡಾ॥ ಸಂಗಮಿತ್ರ ನೋಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಪ್ರಾರಂಭಿಸುತ್ತಾ ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಹಿಂದಿನ ಸಭೆಯಲ್ಲಿ ಕೈಗೊಂಡಿರುವ ನಡುವಳಿಗಳ ಕ್ರಮಗಳ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಮುಂದುವರೆಸುತ್ತಾ ಸಭೆಯನ್ನು ಪ್ರಾರಂಭಿಸಿದರು.

| ಕ್ರಮ ಸಂಖ್ಯೆ | ಮಾಹಿತಿ | ಕ್ರಮವಹಿಸಬೇಕಾದ ಅಧಿಕಾರಿಗಳು |
|---|---|---|
| ❖ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) | |
| 1 | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (BWSSB) | |
| | ♣ ಶ್ರೀ ಗೋವಿಂದ್‌ರಾಜು ಮಾತನಾಡುತ್ತಾ, 5ನೇ ಮತ್ತು 6ನೇ ಅಡ್ಡರಸ್ತೆ ಅಂಬೇಡ್ಕರ್‌ನಗರ ಕ್ರಾಸ್ ಪ್ರದೇಶದ ನಿವಾಸಿಗಳಿಗೆ ಸರಿಯಾಗಿ ನೀರು ಸರಬರಾಜು ಆಗದ ಕಾರಣ ನೀರು ಸರಬರಾಜು ಮಾಡಲು ಕೋರಿರುತ್ತಾರೆ.<br>♣ ಶ್ರೀಮತಿ ಷರೀಫ್ ಮಾತನಾಡುತ್ತಾ, ರೋಸ್‌ಗಾರ್ಡನ್ ಅಡ್ಡರಸ್ತೆಗಳಲ್ಲಿ ಶುದ್ಧ ಕುಡಿಯುವ ನೀರಿನ್ನು ಸರ್ಮಪಕವಾಗಿ ಕಲ್ಪಿಸಿಕೊಡಲು ಹಾಗೂ ಪೈಪಲೈನ ಬದಲಿಸಲು ಕೋರಿದರು.<br>♣ ಶ್ರೀ ಅನೀಜ್ ಅಕ್ತರ್ ರವರು ಮಾತನಾಡುತ್ತಾ, ಆನೇಪಾಳ್ಯ ಅಡ್ಡರಸ್ತೆಗಳಲ್ಲಿ ಮ್ಯಾನ್‌ಹೋಲ್ ಬ್ಲಾಕೇಜ್‌ಗಳನ್ನು ಸರಿಪಡಿಸಲು ಕೋರಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು. BWSSB<br>Replies |
| 2 | ಆರೋಗ್ಯ ಇಲಾಖೆ (Health Department) | |
| | ♣ ಶ್ರೀ ಷರೀಫ್ ರವರು ಮಾತನಾಡುತ್ತಾ, ರೋಸ್ ಗಾರ್ಡನ್ ಅಡ್ಡರಸ್ತೆಗಳಲ್ಲಿ ಕೋವಿಡ್-19 ಸೋಂಕು ತಡೆಗಟ್ಟಲು Sanitaization ಔಷಧಿ ಸಿಂಪಡಣೆ ಕಾರ್ಯವನ್ನು ಪುನಃ ಕೈಗೆತ್ತಿಕೊಳ್ಳಬೇಕೆಂದು ಕೋರಿದರು. | ಹಿರಿಯ ಆರೋಗ್ಯ ಪರಿವೀಕ್ಷಕರು, |
| 3 | ಘನತ್ಯಾಜ್ಯಾ ನಿರ್ವಹಣೆ ಶಾಂತಿನಗರ (SWM Department) | |
| | ♣ ಶ್ರೀ ಅಲ್‌ಫೋಸ್, ಮಾತನಾಡುತ್ತಾ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ರಸ್ತೆಗಳಿಗೂ ಕಸದ ವಾಹನಗಳನ್ನು ಕಳುಹಿಸಿ ಹಸಿತ್ಯಾಜ್ಯ ಮತ್ತು ಒಣತ್ಯಾಜ್ಯವನ್ನು ವಿಂಗಡಿಸಿ ಸರ್ಮಪಕವಾಗಿ ಕಾರ್ಯನಿರ್ವಹಿಸಲು ಹಾಗೂ ಸ್ವಚ್ಛತೆ ಕಾಪಾಡಲು ಪೌರಕಾರ್ಮಿಕರಿಗೆ ಕೈ ಕವಚ, ಮಾಸ್ಕ್‌ಗಳನ್ನು ನೀಡಲು ಹಾಗೂ ಮೂಲಭೂತ ಸೌಕರ್ಯಗಳಾದ ಸಮವಸ್ತ್ರಗಳನ್ನು ಬದಲಿಸಲು ಸಮರ್ಪಕವಾದ ಸ್ಥಳವನ್ನು ಕಲ್ಪಿಸಿಕೊಡಲು ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು/ಹಿರಿಯ ಆರೋಗ್ಯ ಪರಿವೀಕ್ಷಕರು, |
| 4 | ಬೀದಿ ದೀಪಗಳ ನಿರ್ವಹಣೆ (Street lights BBMP) | |
| | ♣ ಶ್ರೀ ಮುತ್ತು ಮಾತನಾಡುತ್ತಾ, ಎಲ್.ಆರ್.ನಗರ ಅಡ್ಡರಸ್ತೆಗಳಲ್ಲಿರುವ ಪೋಲ್‌ಗಳನ್ನು ಸರಿಪಡಿಸಲು ಕೋರಿದರು.<br>♣ ಶ್ರೀ ಅನೀಜ್ ಅಕ್ತರ್ ರವರು ಮಾತನಾಡುತ್ತಾ, 5ನೇ,6ನೇ ಮತ್ತು 7ನೇ ಆನೇಪಾಳ್ಯ ಅಡ್ಡರಸ್ತೆಯ ನಾನಾ ರಸ್ತೆಯಲ್ಲಿ ವಿದ್ಯುತ್ ಕಂಬವು ದುಸ್ಥಿತಿಯಲ್ಲಿದ್ದು ಸಾರ್ವಜನಿಕರಿಗೆ ಅಪಾಯ ಉಂಟಾಗುವ ಸಂಭವವಿದದ್ದು, ಸದರಿ ವಿದ್ಯುತ್ ಕಂಬವನ್ನು ತೆರವುಗೊಳಿಸಲು ಕೋರಿದರು. | ಸಹಾಯಕ ಅಭಿಯಂತರರ, ವಿದ್ಯುತ್ ವಿಭಾಗ |

| | | |
|---|---|---|
| 5 | ಕಾಮಗಾರಿ ಇಲಾಖೆ (Engineering Department) | |
| | ➧ ಶ್ರೀ ಮುತ್ತು ರವರು ಮಾತಾನಾಡುತ್ತಾ ಎಲ್.ಆರ್.ನಗರ ಮುಖ್ಯರಸ್ತೆಯಲ್ಲಿರುವ ಪಾಟ್‌ಹೋಲ್‌ಗಳನ್ನು ಮುಚ್ಚಿಸಲು ಹಾಗೂ ಎಲ್.ಆರ್.ನಗರ ಅಡ್ಡರಸ್ತೆಗಳಿಗೆ ಕಾಂಕ್ರೀಟ್ ಹಾಕಲು ಕೋರಿದರು.<br>➧ ಶ್ರೀಮತಿ ಸುಮತಿ ರವರು ಮಾತನಾಡುತ್ತಾ, ರೋಸ್ ಗಾರ್ಡನ್ ಮುನೇಶ್ವರ ದೇವಸ್ಥಾನದ ಬಳಿ ರಸ್ತೆಯ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು/ಸಹಾಯಕ ಅಭಿಯಂತರರು. |
| 6 | ಸ್ಲಂ ಬೋರ್ಡ್ ಇಲಾಖೆ (Slum board department) | |
| | ➧ ಶ್ರೀ ಮುತ್ತು ಮಾತನಾಡುತ್ತಾ ಕ್ವಾರ್ಟಸ್ ಹಿಂಭಾಗದ ಸಿ-4 ಇಂದ ಸಿ-8ರವರಿಗೆ ರಸ್ತೆ ಕಾಮಗಾರಿಯನ್ನು ನಡೆಸಲು ಕೋರಿದರು. | ವಿಜಯಕುಮಾರ, ಸಹಾಯಕ ಅಭಿಯಂತರರು ಸ್ಲಂ ಬೋರ್ಡ್ ಇಲಾಖೆ |
| 7 | ಪೊಲೀಸ್ ಇಲಾಖೆ ( ಸಂಚಾರ ಮತ್ತು ಕಾ&ಸು) (Traffic Police, Law & Order) | |
| | ➧ ಶ್ರೀ ಅಲ್‌ಫೋಸ್ ಮಾತನಾಡುತ್ತಾ, ಇಂದಿರಾ ಕ್ಯಾಂಟೀನ್ ಬಳಿ ಕಾನೂನು ಬಾಹೀರವಾಗಿ ಅನಧಿಕೃತ ಚಟುವಟಿಕೆಗಳು ನಡೆಯುತ್ತಿದ್ದು ಹಾಗೂ ಬಹಳಷ್ಟು ಜನ ಗುಂಪು ಸೇರುವುದು ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಕೋರಿದರು.<br>➧ ಶ್ರೀ ಮುತ್ತು ಮಾತನಾಡುತ್ತಾ, ಎಲ್.ಆರ್.ನಗರ ಅಡ್ಡರಸ್ತೆಗಳಲ್ಲಿ ಅನಧಿಕೃತ ಚಟುವಟಿಕೆಗಳನ್ನು ನಡೆಯುತ್ತಿದ್ದು, ಸಿ.ಸಿ.ಕ್ಯಾಮೇರಾ ಕನೇಕ್ಷನ್‌ನ್ನು ಸರಿಪಡಿಸಲು ಕೋರಿದರು. | Ashoknagara/Adugodi Traffic Police, Law & Order Department<br>In progress. |

ಅಂತೀಮವಾಗಿ ಅಧ್ಯಕ್ಷರು ಮಾತನಾಡುತ್ತಾ ಮೇಲೆ ತಿಳಿಸಿರುವಂತೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಕೆಲಸ ನಿರ್ವಹಿಸಲು ಕೊರುತ್ತಾ ಮುಂದಿನ ಸಭೆಯಷ್ಟರಲ್ಲಿ ಸಂಬಂಧಿಸಿದ ಎಲ್ಲಾ ದೂರುಗಳನ್ನು ಪರಿಗಣಿಸಿ ಮುಂದಿನ ಸಭೆಯಲ್ಲಿ ತಿಳಿಸಲು ಕೊರಿದೆ ಹಾಗೂ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು, ಮುಂದಿನ ಸಭೆಯಲ್ಲಿ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಮಿತಿಯ ಸದ್ಯಸರುಗಳಿಗೆ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸದ್ಯಸರುಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು
ಸಹಾಯಕ ಅಭಿಯಂತರರು
ವಾರ್ಡ್ -116 ನೀಲಸಂದ್ರ

ನೋಡಲ್ ಅಧಿಕಾರಿ ವಾರ್ಡ್-116 ಹಾಗೂ
ಉಪ ಆರೋಗ್ಯ ವೈದ್ಯಾಧಿಕಾರಿಗಳ
ವಾರ್ಡ್ -116 ನೀಲಸಂದ್ರ

ಪ್ರತಿಗಳನ್ನು :-

1) ಮಾನ್ಯ ಆಯುಕ್ತರು, ಆಪ್ತ ಸಹಾಯಕರಿಗೆ ಕಳುಹಿಸುತ್ತಾ, ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2) ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3) ಜಂಟಿ ಆಯುಕ್ತರು, ಪೂರ್ವ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4) ವಲಯ ಆಯುಕ್ತರು, ಪೂರ್ವ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5) ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ, ಉಪ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.